**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.**

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20

ದಿನಾಂಕ: 17.10.2019

**:: ಜ್ಞಾಪನ ::**

ವಿಷಯ:- 2020ರ ಮಾರ್ಚ್/ಏಪ್ರಿಲ್ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ಶಾಲಾ ಸಂಕೇತ ಪಡೆಯುವ ಬಗ್ಗೆ.

ಉಲ್ಲೇಖ:- ಮಂಡಳಿ ಅಧಿಸೂಚನೆ ಸಂಖ್ಯೆ ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ:30.08.2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವ ಕಾರ್ಯವು ಈಗಾಗಲೇ ಪ್ರಾರಂಭವಾಗಿರುತ್ತದೆ. ಶಾಲಾ ಸಂಕೇತಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸತಕ್ಕದ್ದು.

- ಒಂದು ಮಂಡಳಿಯ ಶಾಲಾ ಸಂಕೇತಕ್ಕೆ ಒಂದು ಡೈಸ್‌ಕೋಡ್ ಮಾತ್ರ ಮ್ಯಾಪಿಂಗ್ ಮಾಡಲು ಸಾಧ್ಯವಿದೆ.
- ಒಂದು ಆಡಳಿತ ಮಂಡಳಿಯ ಶಾಲೆಯೊಂದರಲ್ಲಿ ಎರಡು ಮಾಧ್ಯಮಗಳಿದ್ದು, ಅದರಲ್ಲಿ ಒಂದು ಮಾಧ್ಯಮ ಅನುದಾನಿತ ಹಾಗೂ ಮತ್ತೊಂದು ಮಾಧ್ಯಮ ಅನುದಾನರಹಿತವಾಗಿದ್ದಲ್ಲಿ, ಅಂತಹ ಎರಡು ಡೈಸ್‌ಕೋಡ್‌ಗೆ ಅನುಗುಣವಾಗಿ ಎರಡು ಪ್ರತ್ಯೇಕ ಶಾಲಾ ಸಂಕೇತಗಳನ್ನು ಮಂಡಳಿಯಿಂದ ಪಡೆಯತಕ್ಕದ್ದು.
- ಒಂದೇ ಆಡಳಿತ ಮಂಡಳಿಯು, ಒಂದೇ ಡೈಸ್‌ಕೋಡ್‌ನಡಿ ಎರಡು ಪ್ರತ್ಯೇಕ ಮಾಧ್ಯಮಗಳಿದ್ದು, ಒಂದೇ ಡೈಸ್‌ಕೋಡ್‌ನಡಿಯಲ್ಲಿ ಎಸ್‌ಎಟಿಎಸ್‌ನಲ್ಲಿ ನೋಂದಣಿಯಾಗಿದ್ದರೆ, ಅದಕ್ಕೆ ಎರಡು ಪ್ರತ್ಯೇಕ ಶಾಲಾ ಸಂಕೇತವನ್ನು ಮಂಡಳಿಯಿಂದ ಪಡೆಯುವ ಅವಶ್ಯಕತೆ ಇರುವುದಿಲ್ಲ.
- ಯಾವುದೇ ಶಾಲೆಯು ಒಂದಕ್ಕಿಂತ ಹೆಚ್ಚು ಅನುದಾನರಹಿತ ಮಾಧ್ಯಮಗಳನ್ನು ಹೊಂದಿದ್ದಲ್ಲಿ ಒಂದೇ ಡೈಸ್‌ಕೋಡ್ ಹಾಗೂ ಒಂದೇ ಮಂಡಳಿಯ ಶಾಲಾ ಸಂಕೇತವನ್ನು ಹೊಂದಿ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡಲು ಅವಕಾಶವಿದೆ. ಇದೇ ರೀತಿ ಯಾವುದೇ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಅನುದಾನಿತ ಮಾಧ್ಯಮಗಳಿದ್ದರೆ ಆಗಲೂ ಸಹ ಒಂದೇ ಡೈಸ್‌ಕೋಡ್ ಹಾಗೂ ಒಂದೇ ಮಂಡಳಿಯ ಶಾಲಾ ಸಂಕೇತದಿಂದ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡಬಹುದು.

(ವಿ.ಸುಮಂಗಲ)
ನಿರ್ದೇಶಕರು, ಪರೀಕ್ಷೆಗಳು 17/10/19

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ (ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ) ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

A8_letter1

Scanned by CamScanner